# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ : ಸಾರ್ವಜನಿಕ ಉದ್ದಿಮೆಗಳ ಇಲಾಖೆಯ ಗ್ರಂಥಾಲಯ ಹಾಗೂ ಜ್ಞಾನ ಭಂಡಾರ (Knowledge bank) ವಾರ್ಷಿಕ ಉನ್ನತೀಕರಣ.

ಓದಲಾಗಿದೆ: 1) ಸರ್ಕಾರಿ ಆದೇಶ ಸಂಖ್ಯೆ: ಸಾಉಇ 38 ಎಂಎಸ್ಐ 2008, ದಿನಾಂಕ:04–04–2009.

2) ಕಡತ ಸಂಖ್ಯೆ: ಸಾಉಇ 12 ಎಂಎಸ್ಐ 2009(ಪಿ)

3) ಕಡತ ಸಂಖ್ಯೆ: ಸಾಉಇ 12 ಎಂಎಸ್ಐ 2009

*****

**ಪ್ರಸ್ತಾವನೆ:**

ಪ್ರಪಂಚದಲ್ಲಿರುವ ಪರಿಣಿತ ಶ್ರೇಷ್ಠ ಸಂಸ್ಥೆಗಳು (Institutions of excellence) ಮತ್ತು ರಾಷ್ಟ್ರದಲ್ಲಿರುವ ಪರಿಣಿತ ಶ್ರೇಷ್ಠ ಸಂಸ್ಥೆಗಳು (Instititions of excellence) ಮತ್ತು ರಾಜ್ಯದಲ್ಲಿರುವ ಪರಿಣಿತ ಶ್ರೇಷ್ಠ ಸಂಸ್ಥೆಗಳು, (Institutions of excellence), ಪ್ರಯೋಜನಕಾರಿ, ಉಪಯುಕ್ತವಾಗುವ ವಿಶ್ವಾಸಾತ್ಮಕವಾದ ಮಾಹಿತಿಯನ್ನು ಹೊಂದಿವೆ. ಈ ಮಾಹಿತಿಯನ್ನು ಒಂದು ಕಡೆ ಒದಗಿಸುವುದು ಮತ್ತು ಆ ಮಾಹಿತಿಯನ್ನು ಎಲ್ಲಾ ಸಾರ್ವಜನಿಕ ಉದ್ದಿಮೆಗಳಿಗೆ ಹಂಚುವ ಪ್ರಯತ್ನ ಸಾಕಷ್ಟು ನಡೆದಿಲ್ಲ. ಈ ಮಾಹಿತಿಯನ್ನು ಸಾರ್ವಜನಿಕ ಉದ್ದಿಮೆಗಳ ಇಲಾಖೆಯ ಗ್ರಂಥಾಲಯದಲ್ಲಿ ಸಂಗ್ರಹಿಸಿ ಎಲ್ಲಾ ಸಾರ್ವಜನಿಕ ಉದ್ಯಮಿಗಳಿಗೆ ಮತ್ತು ಸರ್ಕಾರದ ಎಲ್ಲಾ ಇಲಾಖೆಗಳಿಗೆ ಒದಗಿಸುವ ಸದುದ್ದೇಶ ಹಮ್ಮಿಕೊಂಡಿದೆ. ಈ ವರ್ಷ ಸಾರ್ವಜನಿಕ ಉದ್ದಿಮೆಗಳ ಇಲಾಖೆಯಲ್ಲಿ ಒಂದು ಗ್ರಂಥಾಲಯವನ್ನು ಮತ್ತು ಜ್ಞಾನ ಭಂಡಾರವನ್ನು (Knowledge bank) ಈಗಾಗಲೇ ಸೃಷ್ಟಿಸಲಾಗಿದೆ. ಇದು ಪ್ರಾರಂಭಿಕ ಹಂತದಲ್ಲಿದೆ. ಗ್ರಂಥಾಲಯದ ಉನ್ನತೀಕರಣ ಮಾಡಿ, ಜ್ಞಾನ ಭಂಡಾರದಲ್ಲಿ ವಿಕಾಸ ಧೋರಣೆಗಳು (evolutionary trends) ಸೃಷ್ಟಿಸಿ ಸರ್ಕಾರಕ್ಕೆ ಜ್ಞಾನ ಸಮುಪಾರ್ಜನೆಯಲ್ಲಿ ಕೇಂದ್ರ ಬಿಂದು ಆಗಬೇಕೆಂಬ ಗುರಿ ಇಟ್ಟುಕೊಂಡಿದೆ. ಈ ಪ್ರಕ್ರಿಯೆ ಕರ್ನಾಟಕ ರಾಜ್ಯದ ಎಲ್ಲಾ ಸಾರ್ವಜನಿಕ ಉದ್ದಿಮೆಗಳಿಗೆ ಮತ್ತು ಸರ್ಕಾರದ ಎಲ್ಲಾ ಇಲಾಖೆಗಳಿಗೆ ಪ್ರತಿನಿತ್ಯ ಉಪಯೋಗವಾಗಬೇಕು.

ಗ್ರಂಥಾಲಯಗಳಲ್ಲಿರುವ ಮಾಹಿತಿಯಿಂದ ಮಾನವರಲ್ಲಿ ಜಿಜ್ಞಾಸೆ, ಕಲ್ಪನಾದೃಷ್ಟಿ, ಮೌಲ್ಯಧಾರಣ ಭಾವನಾಶಕ್ತಿ, ವೈಜ್ಞಾನಿಕ ಪ್ರಗತಿ ಬೆಳೆದಿದ್ದರಿಂದ ಕೈಗಾರಿಕಾ ಕ್ರಾಂತಿ, ಹಸಿರು ಕ್ರಾಂತಿ, ಕ್ಷೀರ ಕ್ರಾಂತಿ, ಮಾಹಿತಿ ತಂತ್ರಜ್ಞಾನ ಕ್ರಾಂತಿ, ಆರೋಗ್ಯ ಕ್ರಾಂತಿ, ಜೈವಿಕ ತಂತ್ರಜ್ಞಾನ ಕ್ರಾಂತಿ, ಪ್ರಜಾಸತ್ತಾತ್ಮಕ ಕ್ರಾಂತಿ ಇತ್ಯಾದಿಗಳು ಹುಟ್ಟಿಕೊಂಡು ಬಂದಿವೆ.

ಈ ಕಾಲದಲ್ಲಿ ಎಲ್ಲಾ ಬುದ್ಧಿಜೀವಿಗಳು ಮತ್ತು ಎಲ್ಲಾ ಇಲಾಖೆಗಳಲ್ಲಿರುವ ನೌಕರರು ಸಾರ್ವಜನಿಕ ಉದ್ದಿಮೆಗಳ ಇಲಾಖೆಯ ಅಧಿಕಾರಿಗಳು ಇಲಾಖೆಯಲ್ಲಿ ಸ್ಥಾಪಿಸಿದ ಜ್ಞಾನ ಭಂಡಾರವನ್ನು (Knowledge bank) ಉಪಯೋಗ ಮಾಡಲು ಮುಂದುವರೆಸಲು ಅವಶ್ಯ. ಇತ್ತೀಚಿನ ಕಾಲದಲ್ಲಿ ಬಹುತೇಕ ಜನರು ಇಂತಹ ಒಂದು ಒಳ್ಳೆಯ ಹವ್ಯಾಸವನ್ನು ಬಿಟ್ಟು ಯಾವಾಗಲೂ ಟಿ.ವಿ. ನೋಡುವುದು, ಚಲನಚಿತ್ರ ನೋಡುವುದು, ಕರ್ಮಣೇವಾಧಿಕರಸ್ತವಾದ ಅಭ್ಯಾಸಗಳನ್ನು ಬಿಟ್ಟು ಕಾಲಹರಣ ಮಾಡುವುದು ಶೋಚನೀಯ. ಸಾರ್ವಜನಿಕ ಉದ್ದಿಮೆಗಳ ಇಲಾಖೆ ವಿನಮ್ರತೆಯಿಂದ ತನಗಿರುವ ಸ್ವಲ್ಪ ಸಂಪನ್ಮೂಲದಿಂದ ಚಿಕ್ಕದಾದ ಜ್ಞಾನ ಭಂಡಾರವನ್ನು ಪ್ರಾರಂಭಿಸಿದೆ. ಇದು ಬೆಳೆಯಬೇಕು ಮತ್ತು ಎಲ್ಲರಿಗೂ ಉಪಯೋಗವಾಗಬೇಕೆಂದರೆ ಸರ್ಕಾರದ ಸಹಕಾರಬೇಕಾಗಿದೆ. ನಿರಂತರವಾದ ಜ್ಞಾನ ಸಂಪಾದನೆ ಮತ್ತು ಜ್ಞಾನದಲ್ಲಿ ಸುಧಾರಣೆ ತರಬೇಕು ಎಂಬ ಗುರಿಗಳನ್ನು ಇಟ್ಟುಕೊಂಡರೆ ಗ್ರಂಥಾಲಯದ ಉನ್ನತೀಕರಣ ಅವಶ್ಯ.

ಈ ಕಾಲದಲ್ಲಿ ಮಾಹಿತಿ ತಂತ್ರಜ್ಞಾನ ಕ್ರಾಂತಿ ಬಂದಿರುವುದರಿಂದ ಪ್ರಪಂಚದಲ್ಲಿರುವ ಜ್ಞಾನ ದಿನಕ್ಕೆ ಎರಡು ಸಾರಿ ಬೆಳೆಯುತ್ತದೆ ಎಂದು ತಿಳಿದಿರುವ ಎಲ್ಲರೂ ಹೇಳುತ್ತಾರೆ. ಇಡೀ ಪ್ರಪಂಚವೇ ಒಂದು ಜಾಗತೀಕರಣ ಹಳ್ಳಿ (Global Village) ಆಗಿದೆ. ಆದ್ದರಿಂದ, ಈ ಯೋಜನೆಯನ್ನು ಜಾಗೃತವಾಗಿ (consciously) ಸೃಷ್ಟಿಸಲಾಗಿದೆ. ಯೋಜನೆ ಮತ್ತು ಆರ್ಥಿಕ ಇಲಾಖೆಯ ಸಹಾಯ ಸಹಕಾರವನ್ನು ಕೋರಲಾಗಿದೆ. ಆದುದರಿಂದ ಈ ಕೆಳಕಂಡ ಆದೇಶ.

<u>ಸರ್ಕಾರಿ ಆದೇಶ ಸಂಖ್ಯೆ: ಸಾಉಇ 12 ಎಂಎಸ್‌ಐ 2009</u>

<u>ಬೆಂಗಳೂರು, ದಿನಾಂಕ:23-05-2009</u>

ಮೇಲೆ ವಿವರಿಸಿದ ಹಿನ್ನೆಲೆಯಲ್ಲಿ ಸಾರ್ವಜನಿಕ ಉದ್ದಿಮೆಗಳ ಇಲಾಖೆಯ ಗ್ರಂಥಾಲಯದ ವಾರ್ಷಿಕ ಉನ್ನತೀಕರಣ ಹಾಗೂ ಸಾರ್ವಜನಿಕ ಉದ್ದಿಮೆಗಳ ಮಾಹಿತಿ ಬ್ಯಾಂಕ್, (Knowledge bank) ಯೋಜನೆಯನ್ನು ರಚಿಸಿ ಅಸ್ತಿತ್ವಕ್ಕೆ ತರಲಾಗಿದೆ.

ಈ ಜ್ಞಾನ ಭಂಡಾರಕ್ಕಾಗಿ ವಾರ್ಷಿಕ ವೆಚ್ಚ 5.00 ಲಕ್ಷ ರೂ.ಗಳನ್ನು (ಐದು ಲಕ್ಷ ರೂ.ಗಳು) ಲೆಕ್ಕಶೀರ್ಷಿಕೆ ಸಂಖ್ಯೆ: 3451-00-091-0-01 ರಲ್ಲಿ ಇಡಲಾಗಿದೆ. ಮತ್ತು ಈ ಹೊಸ ಯೋಜನೆಯ ಹಣದಿಂದ ರಾಜ್ಯದಲ್ಲಿ, ರಾಷ್ಟ್ರದಲ್ಲಿ, ಪ್ರಪಂಚದಲ್ಲಿರುವ ಸಾರ್ವಜನಿಕ ಉದ್ಯಮಗಳ ಬಗ್ಗೆ ಪರಿಣಿತಿ ಹೊಂದಿದ ಶ್ರೇಷ್ಠ ಪುಸ್ತಕಗಳನ್ನು ಖರೀದಿ ಮಾಡಲು ಮತ್ತು ಬಹುಮುಖವಾಗಿ ಈ ಜ್ಞಾನ

ಭಂಡಾರವನ್ನು ಮತ್ತು ಗ್ರಂಥಾಲಯವನ್ನು ನಿರಂತರವಾಗಿ ಅಭಿವೃದ್ಧಿ ಮಾಡಲು, ಎಲ್ಲಾ ಸಾರ್ವಜನಿಕ ಉದ್ದಿಮೆಗಳಿಗೆ, ಸಾರ್ವಜನಿಕ ಉದ್ದಿಮೆಗಳ ಇಲಾಖೆಗೆ ಮತ್ತು ಎಲ್ಲಾ ಸರ್ಕಾರದ ಇಲಾಖೆಗಳಿಗೆ ಉಪಯುಕ್ತ ಮಾಡಲು ಉದ್ದೇಶಿಸಲಾಗಿದೆ. ಸಾರ್ವಜನಿಕ ಉದ್ದಿಮೆಗಳ ಇಲಾಖೆಗೆ ಆಯವ್ಯಯದಲ್ಲಿ ಒದಗಿಸಿರುವ 50.00 ಲಕ್ಷ ರೂ.ಗಳ (ಐದು ಲಕ್ಷ ರೂ.ಗಳು) ಆಯವ್ಯಯದ ಇತಿಮಿತಿಯೊಳಗೆ (ಲೆಕ್ಕಶೀರ್ಷಿಕೆ ಸಂಖ್ಯೆ: 3451-00-091-0-01) ಇದೇ ವರ್ಷದ ಆಯವ್ಯಯದಲ್ಲಿ ಉಳಿಸಿದ (Set apart) 5.00 ಲಕ್ಷ ರೂ.ಗಳನ್ನು (ಐದು ಲಕ್ಷ ರೂ.ಗಳು) ಸಂಪೂರ್ಣವಾಗಿ ಗ್ರಂಥಾಲಯದ ವಾರ್ಷಿಕ ಉನ್ನತೀಕರಣ ಹಾಗೂ ಸಾರ್ವಜನಿಕ ಜ್ಞಾನಭಂಡಾರ ಉನ್ನತೀಕರಣ ಎಂಬ ಕಾರ್ಯಕ್ರಮವನ್ನು ಚಾಲ್ತಿಯಲ್ಲಿರುವ, ಮುಂದುವರೆದ ಯೋಜನೆಯಲ್ಲಿ ಹೊಸ ಕಂಪೋನೆಂಟ್ ಎಂದು ಪರಿಗಣಿಸಿ ಸದುಪಯೋಗ ಪಡಿಸಲು ತೀರ್ಮಾನಿಸಲಾಗಿದೆ.

ಈ ಆದೇಶವನ್ನು ಆರ್ಥಿಕ ಮತ್ತು ಯೋಜನೆ ಇಲಾಖೆಯ ಟಿಪ್ಪಣಿ ಸಂಖ್ಯೆ ಕ್ರಮವಾಗಿ: ಎಫ್‌ಡಿ 777 ಇಎಕ್ಸ್‌ಪಿ-1/09, ದಿನಾಂಕ: 13-05-2009 ಮತ್ತು ಪಿಡಿ/10/ಪಿಎಸ್‌ಒ/2009, ದಿನಾಂಕ: 16-05-2009 ಸಹಮತಿಯೊಂದಿಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಬಿ. ಗಂಗಾಧರ)
ಸರ್ಕಾರದ ಅಧೀನ ಕಾರ್ಯದರ್ಶಿ(ತಾಂತ್ರಿಕ)
ಸಾರ್ವಜನಿಕ ಉದ್ದಿಮೆಗಳ ಇಲಾಖೆ.

ಗೆ: ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ, ಬೆಂಗಳೂರು

ಇವರಿಗೆ:

1) ಪ್ರಧಾನ ಮಹಾ ಲೇಖಪಾಲಕರು, ಕರ್ನಾಟಕ, ಬೆಂಗಳೂರು
2) ಮಹಾಲೇಖಪಾಲಕರು, ಕರ್ನಾಟಕ, ಬೆಂಗಳೂರು
3) ಸರ್ಕಾರದ ಮುಖ್ಯ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ, ವಿಧಾನಸೌಧ, ಬೆಂಗಳೂರು.
4) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ, ವಿಧಾನಸೌಧ, ಬೆಂಗಳೂರು.
5) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ಹಾಗೂ ಅಭಿವೃದ್ಧಿ ಆಯುಕ್ತರು, ಬೆಂಗಳೂರು
6) ಮಾನ್ಯ ಮುಖ್ಯ ಮಂತ್ರಿಯವರ ಪ್ರಧಾನ ಕಾರ್ಯದರ್ಶಿಗಳು, ಬೆಂಗಳೂರು
7) ಸರ್ಕಾರದ ಎಲ್ಲಾ ಪ್ರಧಾನ ಕಾರ್ಯದರ್ಶಿಗಳು/ ಕಾರ್ಯದರ್ಶಿಗಳು.
8) ಎಲ್ಲಾ ಸಾರ್ವಜನಿಕ ಉದ್ದಿಮೆಗಳ ವ್ಯವಸ್ಥಾಪಕ ನಿರ್ದೇಶಕರುಗಳು, ಬೆಂಗಳೂರು.